ವಿಷಯ :- ಗದಗ್ ನಗರದಲ್ಲಿ ಕೆ.ಎಸ್.ಆರ್.ಟಿ.ಸಿ./ಕೆ.ಇ.ಬಿ ಸಿಬ್ಬಂದಿ ವರ್ಗದವರಿಗೆ ಮನೆಗಳನ್ನು ನೀಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2381 (3047)

ಶ್ರೀ ಡಿ. ಆರ್. ಪಾಟೀಲ್ (ಗದಗ್) :- ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗ ನಗರದಲ್ಲಿರುವ ಕೆಎಸ್ಆರ್‌ಟಿಸಿ ಹಾಗೂ ಕೆಇಬಿ ಸಿಬ್ಬಂದಿ ವರ್ಗದವರು ಮನೆ ಕಟ್ಟಿಸಿಕೊಡಲು ಕೋಂ ಈಗಾಗಲೇ ಮುಂಗಡ ಹಣ ಹೌಸಿಂಗ್ ಬೋರ್ಡ್‌ಗೆ ಜಮೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಎಲ್ಲಾ ಸಿಬ್ಬಂದಿ ವರ್ಗದವರಿದೆ ಈ ಹಣಕಾಸಿನ ವರ್ಷ ಮನೆ ಕಟ್ಟಿಸಿ ಕೊಡುವ ಕೆಲಸ ಪ್ರಾರಂಭಿಸಲಾಗುವುದೇ?

ಇ) ಈ ಮನೆಗಳನ್ನು ಕಟ್ಟಿಸಲು ಅಂದಾಜು ವಿರ್ಚು ಎಷ್ಟು?

ಈ) ಈ ಮನೆಗಳನ್ನು ಕಟ್ಟಿಸಲು ಪ್ರಾರಂಭಿಸುವಾಗ ನಿಗಧಿಗೊಳಿಸಿದ ಬೆಲೆ ಹೆಚ್ಚಾಗದ ಹಾಗೆ ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ್ ರೆಡ್ಡಿ (ವಸತಿ ರಾಜ್ಯ ಸಚಿವರು) :-

ಅ) ಹೌದು

ಗದಗ ನಗರದಲ್ಲಿ ಈ ಕೆಳಗಿನಂತೆ ಕೆಇಬಿ ಮತ್ತು ಕೆಎಸ್ಆರ್ ಟಿಸಿ ನೌಕರರು ತಮಗೆ ಮನೆಗಳನ್ನು ಕಟ್ಟಿಸಿಕೊಡಲು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

1) ಕೆ.ಇ.ಬಿ. ನೌಕರರಿಂದ 206 (ಎಲ್‌ಐಜಿ-122 ಎಂಐಜಿ-84)

2) ಕೆಎಸ್ಆರ್‌ಟಿಸಿ ನೌಕರರಿಂದ 636 (ಎಲ್‌ಐಜಿ-294 ಎಂಐಜಿ-342)

ಸದರಿ ನೌಕರರಿಂದ ನೊಂದಣಿ ಶುಲ್ಕ ಪಾವತಿಯಾಗಿದೆಯೇ ಹೊರತು ಮುಂಗಡ ಹಣವನ್ನು ಅವರಿಂದ ಪಡೆದಿರುವುದಿಲ್ಲ. ಆದರೆ ಈ ಅರ್ಜಿದಾರರಿಗೇ ಪ್ರತ್ಯೇಕವಾದ ಯೋಜನೆಯನ್ನು ಕರ್ನಾಟಕ ಗೃಹಮಂಡಳಿ ಕೈಗೆತ್ತಿಕೊಂಡಿಲ್ಲ.

ಆ) ಈಗಾಗಲೇ ಮಂಡಳಿಯ ವಶದಲ್ಲಿರುವ 76 ಎಕರೆ 10 ಗುಂಟೆ ಜಮೀನಿನಲ್ಲಿ ವಸತಿ ಯೋಜನೆಯನ್ನು ತಯಾರಿಸಲು ಕ್ರಮ ತೆಗೆದುಕೊಳ್ಳಲಾಗದೆ ಹಾಗೂ ಸದರಿ ನೌಕರರು ನೊಂದಣಿ ಮಾಡಿಕೊಂಡಿರುವುದರಿಂದ ಹಂಚಿಕೆಯನ್ನು ಮಾಡುವಾಗ ಅವರ ಅರ್ಜಿಗಳನ್ನು ಪರಿಗಣಿಸಲಾಗುವುದು.

ಇ) ಈ ಯೋಜನೆಯು ಪ್ರಾರಂಭಿಕ ಹಂತದಲ್ಲಿದೆ. ಹಾಗೂ ಅಂದಾಜು ಪಟ್ಟಿಗಳನ್ನು ತಯಾರಿಸಬೇಕಾಗಿದೆ. ಅಂದಾಜು ಪಟ್ಟಿ ತಯಾರಿಸಿದ ನಂತರ ಅಂದಾಜು ಬೆಲೆಯು ತಿಳಿದು ಬರುತ್ತದೆ.

ಈ) ಕರ್ನಾಟಕ ಗೃಹ ಮಂಡಳಿಯು ಗುತ್ತಿಗೆದಾರರಿಗೆ ನಿಗದಿತ ವೇಳೆಯಲ್ಲಿ ಕೆಲಸಗಳನ್ನು ಪೂರೈಸಲು ಟರ್ನ್‌ಕೀ ಆಧಾರದ ಮೇಲೆ ಬೆಲೆಗಳು ಹೆಚ್ಚಾಗದಂತೆ ನೋಡಿಕೊಳ್ಳುವುದು.

ವಿಷಯ :- ರಾಜ್ಯದಲ್ಲಿ ಪರಿಶಿಷ್ಟಜಾತಿ : ಪರಿಶಿಷ್ಟ ವರ್ಗದವರ ಸ್ಥಾನಮಾನದ ಬಗ್ಗೆ ಸಮೀಕ್ಷೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2382 (2762)

ಶ್ರೀ ರಾಮಲಿಂಗರೆಡ್ಡಿ (ಜಯನಗರ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪರಿಶಿಷ್ಟಜಾತಿ : ಪರಿಶಿಷ್ಟವರ್ಗಗಳ ಸ್ಥಾನಮಾನಗಳನ್ನು ಕುರಿತು ಸಮೀಕ್ಷೆಯನ್ನು ರಾಜ್ಯ ಸರ್ಕಾರವು ಅಕ್ಟೋಬರ್ 2, 1995 ರಿಂದ ನಡೆಸಲು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಸಮೀಕ್ಷೆಯನ್ನು ಯಾವ ಮಾದರಿಯಲ್ಲಿ ನಡೆಸಲಾಗುವುದು;

ಇ) ಈ ಸಮೀಕ್ಷೆಯನ್ನು ನಡೆಸಲು ಕಾರಣಗಳೇನು?

ಈ) ಈ ಸಮೀಕ್ಷೆಯನ್ನು ಪೂರ್ಣಗೊಳಿಸಲು ತೆಗೆದುಕೊಳ್ಳಲಾದ ಅವಧಿ;

ಉ) ಈ ಸಮೀಕ್ಷೆಯನ್ನು ಕೈಗೊಳ್ಳಲು ಬೇಕಾಗುವ ವೆಚ್ಚವೆಷ್ಟು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಲ್ಯಾಣ ಸಚಿವರು) :-

ಅ) ಹೌದು

ಆ) ಈ ಸಮೀಕ್ಷೆಯನ್ನು ಎಲ್ಲಾ ಜಿಲ್ಲಾಧಿಕಾರಿಗಳ ನೇರ ನೇತೃತ್ವದಲ್ಲಿ ಜನಗಣತಿಯ ಮಾದರಿಯಲ್ಲಿಯೇ ತೆಗೆದುಕೊಳ್ಳಲಾಗುವುದು. ಈ ಸಮೀಕ್ಷೆಯ ಕಾರ್ಯವನ್ನು ಕಂದಾಯ, ಶಿಕ್ಷಣ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಮತ್ತು ಅಂಕಿಅಂಶಗಳ ಇಲಾಖೆಯ ನೌಕರರ ಮೂಲಕ ತೆಗೆದುಕೊಳ್ಳಲಾಗುವುದು.

ಇ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಸಾಮಾಜಿಕ ಆರ್ಥಿಕ ಶೈಕ್ಷಣಿಕ, ನೈಜ ಆರ್ಥಿಕ ಸ್ಥಿತಿ-ಗತಿಗಳನ್ನು ತೆಗೆದುಕೊಳ್ಳಲು ಹಾಗೂ ಯೋಜನೆಗಳನ್ನು ರೂಪಿಸಲು ಈ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.

ಈ) ಈ ಸಮೀಕ್ಷೆಯನ್ನು ಆರು ತಿಂಗಳೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಉ) ಈ ಸಮೀಕ್ಷೆಯನ್ನು ಕೈಗೊಳ್ಳಲು 1.28 ಕೋಟಿ ರೂ. ಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.